ಭಾಷ್ಯದೀಪಿಕಾಕಾರರಾದ

# ಶ್ರೀ ಜಗನ್ನಾಥ ತೀರ್ಥರು



Sri Jagannatha theertharu
1755-1770,Kumbakonam

ವಿದ್ವಂತ್ಪಂಕಜ ಮಾರ್ತಾಂಡಃ ವಾದಿಮತ್ತೇಭಕೇಸರಿ ।

ಜಗನ್ನಾಥ ಗುರುರ್ಭೂಯಾತ್ ಧ್ಯಾಯ ಸೇ ಶ್ರೇಯಸೇಮಮ॥

ಆರಾಧನೆ ದಿನ – ಪುಷ್ಯ ಶುದ್ದ ದ್ವಿತೀಯ ವೃಂದಾವನ – ಕುಂಭಕೋಣ

ಇವರ ಗ್ರಂಥಗಳು – "ಭಾಷ್ಯದೀಪಿಕಾ" ಮತ್ತು "ಸೂತ್ರದೀಪಿಕಾ"

ಇವರು – ಗಾಲವ ಋಷಿಗಳ ಅವತಾರಭೂತರೆಂದು ಹೇಳುತ್ತಾರೆ

ಇವರ ಗುರುಗಳು – ಶ್ರೀ ರಘುನಾಥತೀರ್ಥರು (ಶ್ರೀ ಶೇಷಚಂದ್ರಿಕಾಚಾರ್ಯರು)

ಇವರು ತಮ್ಮ ಪೂರ್ವಾಶ್ರಮದಲ್ಲಿ ೩೦ ವರ್ಷಗಳ ಕಾಲ ಶ್ರೀ ಶೇಷಚಂದ್ರಿಕಾಚಾರ್ಯರ ಹತ್ತಿರ ವಿದ್ಯಾಭ್ಯಾಸ ಮಾಡಿದಾಗ "ಭಾಷ್ಯದೀಪಿಕಾ" ಹಾಗೂ "ಸೂತ್ರದೀಪಿಕಾ" ಎಂಬ ಎರಡು ಅಮೂಲ್ಯ ಗ್ರಂಥಗಳನ್ನು ರಚಿಸಿದರು. ಈ ಗ್ರಂಥಗಳನ್ನು ಆಕಸ್ಮಿಕವಾಗಿ ಕಂಡ ಗುರುಗಳು ಮರುದಿನವೇ ತಮ್ಮ ಪೀಠಕ್ಕೆ ಉತ್ತರಾಧಿಕಾರಿಯಾಗಿ ನೇಮಿಸಿ ಸನ್ಯಾಸದೀಕ್ಷೆ ನೀಡಿದರು.

ಒಮ್ಮೆ ತಮ್ಮ ಸಂಚಾರಕಾಲದಲ್ಲಿ ತುರುಷ್ಕ ಸೈನಿಕರು ಇವರಲ್ಲಿದ್ದ ದೇವರಪೆಟ್ಟಿಗೆಯುನ್ನು ಅಪಹರಿಸಲು ಪ್ರಯತ್ನಿಸಿದಾಗ, ಇವರು ದೇವರ ಪೆಟ್ಟಿಗೆ ಜೊತೆಗೇ ಕಾವೇರಿ ನದಿಗೆ ಹಾರಿ ಸುಮಾರು ೨೦ ಮೈಲಿ ಈಜಿ ದೇವರ ಪೆಟ್ಟಿಗೆಯುನ್ನು ರಕ್ಷಿಸಿದರು

ಮತ್ತೊಮ್ಮೆ ಯೋಧರು ಬಂದಾಗ ನರಸಿಂಹನನ್ನು ಪ್ರಾರ್ಥಿಸಲು ಅಲ್ಲೇ ಹತ್ತಿರದಲ್ಲಿದ್ದ ಮಾವಿನಮರದಿಂದ ಶ್ರೀನರಸಿಂಹದೇವರು ದರ್ಶನವಿತ್ತು ತಮ್ಮನ್ನು ರಕ್ಷಿಸಿದರು ಎಂದು ತಮ್ಮ ಭಾಷ್ಯದೀಪಿಕಾದಲ್ಲಿ ತಿಳಿಸಿದ್ದಾರೆ.

ಆ ಶ್ಲೋಕ ಇಂತಿದೆ :

ಆಮ್ರಸ್ತಮ್ಮಾತ್ ಸಮಾಗತ್ಸ ತಾಮ್ರ ತುಂಡಾನ್ ನಿಹತ್ಯಯ ।
ನಮ್ರಂ ನೌಮಿ ಜಗನ್ನಾಥಮ್ ತಮ್ರೋಪಾತ್ತಮ್ ನೃಕೇಸರಿ ।

"ಕೃಷ್ಣಾರ್ಪಣಮಸ್ತು"

*ಸಂಗ್ರಹ – ನರಹರಿಸುಮಧ್ವ*